ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 125-130
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ನಾಟಕ ಸಾಹಿತ್ಯಕ್ಕೆ ಗಿರೀಶ್ ಕಾರ್ನಾಡ್ ಅವರ ಕೊಡುಗೆಗಳು

**ಡಾ. ರವೀಂದ್ರ ಎಚ್. ಎಲ್**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಕುವೆಂಪು ಮಹಾವಿದ್ಯಾಲಯ ಪ್ರಥಮ ದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ

***Abstract:***

*ನಾಟಕವು ಜಾಗತಿಕ ಪ್ರಾಚೀನ ಸಾಹಿತ್ಯ ಸಂಸ್ಕೃತಿಯ ಪರಂಪರೆಯಲ್ಲಿ ಪ್ರಮುಖವಾದ ಕಲೆಯಾಗಿದೆ. ನಾಟಕವು ಆದಿ ಮಾನವನ ದೇವರು ಧರ್ಮಗಳಲು ಪ್ರೀತ್ಯರ್ಥ ಹುಟ್ಟಿಕೊಂಡ ಕಲೆಯಾಗಿದೆ. ಆದಿಮ ಕುಣಿತ ಹಾಡು ಮೊದಲಾದವು ಅಭಿನಯದ ಪ್ರಾಥಮಿಕ ಪರಿಕಲ್ಪನೆಯಾಗಿದೆ. ನಾಟಕವು ಜನಪದರ ಪ್ರಮುಖ ಸಾಹಿತ್ಯವಾಹಿನಿಯಾಗಿದೆ. ಆ ನಂತರ ಶಿಷ್ಟ ಸಾಹಿತ್ಯದ ಒಂದು ಶ್ರೇಷ್ಠ ಸಾಹಿತ್ಯ ಪ್ರಕಾರವಾಗಿ ಗಮನಾರ್ಹತೆ ಪಡೆದುಕೊಂಡಿತು. ಹಾಗೆಯೇ ನಾಟಕವು ದೃಶ್ಯ ಮತ್ತು ಶ್ರವ್ಯ ಮಾಧ್ಯಮಗಳಿಂದ ಕೂಡಿದ ಹಾಗೂ ಹಲವು ಕಲೆಗಳು ಸೇರಿ ಆದ ಒಂದು ಸಂಕೀರ್ಣ ಕಲೆಯಾಗಿದೆ. ಪ್ರಸ್ತುತ ಲೇಖನದಲ್ಲಿ ಕನ್ನಡ ನಾಟಕ ಸಾಹಿತ್ಯಕ್ಕೆ ಗಿರೀಶ್ ಕಾರ್ನಾಡ್‌ರವರ ಕೊಡುಗೆಯನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ನಾಟಕ ಸಾಹಿತ್ಯ, ಗಿರೀಶ್ ಕಾರ್ನಾಡ್, ಯಯಾತಿ, ತುಘಲಕ್, ಹಯವದನ, ಅಂಜುಮಲ್ಲಿಗೆ, ಹಿಟ್ಟಿನ ಹುಂಜ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ, ಟಿಪ್ಪುವಿನ ಕನಸುಗಳು*

## ಪೀಠಿಕೆ

ಭಾರತೀಯ ನಾಟಕ ಸಾಹಿತ್ಯ ಪ್ರಕಾರದಲ್ಲಿ ಕನ್ನಡ ನಾಟಕ ಸಾಹಿತ್ಯ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಕನ್ನಡ ಸಾಹಿತ್ಯವು ಹಳೆಗನ್ನಡ ಸಾಹಿತ್ಯದಿಂದ ಪ್ರಾರಂಭವಾಗಿ ಆಧುನಿಕ ಕನ್ನಡ ಸಾಹಿತ್ಯದವರೆಗೂ ವಿಕಾಸಗೊಂಡಿದ್ದು ಕನ್ನಡದ ಅನೇಕ ಸಾಹಿತಿಗಳು ನಾಟಕ ಸಾಹಿತ್ಯಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯ ಪ್ರಕಾರದ ಸಂದರ್ಭದಲ್ಲಿ ಕುವೆಂಪು, ಮೂರ್ತಿರಾವ್, ಬಿ.ಎಂ ಶ್ರೀಕಂಠಯ್ಯ, ಅನಂತ ಮೂರ್ತಿ, ಗಿರೀಶ್ ಕಾರ್ನಾಡ್, ಸಿದ್ದಲಿಂಗಯ್ಯ, ಚಂದ್ರಶೇಖರ ಕಂಬಾರರು ಮುಂತಾದ ಮಹನೀಯರು ತಮ್ಮದೆ ಕೊಡುಗೆಗಳನ್ನು ನೀಡಿದ್ದಾರೆ.

ಆಧುನಿಕ ಕನ್ನಡ ನಾಟಕ ಸಾಹಿತ್ಯಕ್ಕೆ ಗಿರೀಶ್ ಕಾರ್ನಾಡ್‌ರವರು ಪ್ರಮುಖ ಕೊಡುಗೆಯನ್ನು ನೀಡಿದ್ದಾರೆ. ಕಾರ್ನಾಡರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಧಾರವಾಡ ಮತ್ತು ಮುಂಬೈ ಕಾಲೇಜುಗಳಲ್ಲಿ ನಡೆಯಿತು. ಎಂ.ಎ ಪದವಿಯನ್ನು ಆಕ್ಸಫರ್ಡ್‌ನಲ್ಲಿ ಪಡೆದರು. ಕಾರ್ನಾಡ್‌ರವರಿಗೆ ಬಾಲ್ಯದಿಂದಲೆ ನಾಟಕದ ಮೇಲೆ ಆಸಕ್ತಿಯ ಪರಿಣಾಮ ಮುಂದೆ ಶ್ರೇಷ್ಠ ನಾಟಕಕಾರರಾಗಿ ರೂಪುಗೊಳ್ಳಲು ಕಾರಣವಾಹಿತು. ಕಾರ್ನಾಡರ ಮೇಲೆ ಯೂರೋಪಿಯನ್, ಸಂಸ್ಕೃತ ಮತ್ತು ದೇಸಿಯ ನಾಟಕ ಸಾಹಿತ್ಯ ಮತ್ತು ರಂಗ ಪ್ರಯೋಗವು ತುಂಬಾ ದಟ್ಟ ಪ್ರಭಾವ ಬೀರಿದವು.

***Please cite this article as:*** ರವೀಂದ್ರ, ಎಚ್. ಎಲ್. (2025). ಕನ್ನಡ ನಾಟಕ ಸಾಹಿತ್ಯಕ್ಕೆ ಗಿರೀಶ್ ಕಾರ್ನಾಡ್ ಅವರ ಕೊಡುಗೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(3), 125–130

ಗಿರೀಶ್ ಕಾರ್ನಾಡ್‌ರವರು ರಚಿಸಿದ ನಾಟಕಗಳು ಕೇವಲ ಕನ್ನಡ ಮಾತ್ರವಲ್ಲದೆ, ಭಾರತೀಯ ನಾಟಕ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನುಂಟು ಮಾಡಿತು. ಅವರ ನಾಟಕ ಕೊಡುಗೆಯ ವಿಶಿಷ್ಟತೆಯನ್ನು ಗಮನಿಸಿದ ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸರಕಾರಗಳು ಹಲವಾರು ಪ್ರಶಸ್ತಿ ನೀಡಿ ಗೌರವಿಸಿವೆ.

ಕನ್ನಡ ನಾಟಕ ಸಾಹಿತ್ಯ ಪರಂಪರೆಯು ಮೊತ್ತಮೊದಲು ಸಂಸ್ಕೃತ ಮತ್ತುಇಂಗ್ಲಿಷ್ ನಾಟಕ ಸಾಹಿತ್ಯವನ್ನು ಅನುವಾದ ರೂಪಾಂತರ ಮಾಡುವ ಮೊದಲಾದ ಪ್ರಕ್ರಿಯೆಗಳಿಂದ ಪ್ರಾರಂಭವಾಯಿತು. ಆದರೆ ಈ ಬೆಳವಣಿಗೆಯು ಅತ್ಯಲ್ಪ ಅವಧಿಯಲ್ಲಿಯೇ ಸ್ವತಂತ್ರ ಹಾದಿಯನ್ನು ತುಳಿದರೂ ಅದು ಜಡಗೊಳ್ಳು ತೊಡಗಿತು. ಈ ನಿಟ್ಟಿನಲ್ಲಿ ಗಿರೀಶ್ ಕಾರ್ನಾಡರು ಪುರಾಣ, ಇತಿಹಾಸ ಮತ್ತು ಜಾನಪದ ದ್ರವ್ಯಗಳಿಂದ ಪ್ರೇರಣೆ ಪಡೆದು ಅವುಗಳನ್ನು ಸಮಕಾಲೀನ ಬದುಕಿಗೆ ಪ್ರಸ್ತುತವಾಗುವಂತೆ ವಿಶಿಷ್ಟ ರಚನೆಯನ್ನೂ ಮಾಡುವ ಮೂಲಕ ಒಂದು ಹೊಸ ಅಲೆಯನ್ನುಂಟು ಮಾಡಿದರು. ಕಾರ್ನಾಡರು ಅತಿ ಅಂತರ್ಮುಖಿಯೂ ಅಲ್ಲದ ಅತಿ ಬಹಿರ್ಮುಖಿಯೂ ಅಲ್ಲದ ಒಂದು ಆರೋಗ್ಯಕಾರಿ ಸಮತೋಲನ ನಾಟಕ ಕೃತಿಗಳನ್ನು ರಚಿಸಿದ್ದಾರೆ. ಅಂತೆಯೇ ಅವರ ಕೃತಿಗಳು ಭಾರತೀಯ ನಾಟಕ ಸಾಹಿತ್ಯ ಹಾಗೂ ರಂಗಭೂಮಿಗಳೆರಡಕ್ಕೂ ಹೊಸ ಚೈತನ್ಯಯವನ್ನು ನೀಡಿತು.

ಕಾರ್ನಾಡರ ಮೊದಲ ನಾಟಕ 'ಯಯಾತಿ'. ಈ ನಾಟಕವನ್ನು 1961ರಲ್ಲಿ ರಚಿಸಿದರು. ಈ ನಾಟಕದ ಕಥಾವಸ್ತು ವೇದ ಕಾಲದಷ್ಟು ಪ್ರಾಚೀನವಾದದ್ದು,ಆದರೆ ಅದರ ವಿಸ್ತಾರ ಅಖ್ಯಾನ ಮಹಾಭಾರತದ ಆದಿ ಪರ್ವದಲ್ಲಿ ಸಿಗುವ ಕಥೆಯಾಗಿದೆ. ಗಿರೀಶ್ ಕಾರ್ನಾಡರು ತಮ್ಮ ಆಶಯಗಳಿಗೆ ಅನುಗುಣವಾಗಿ ಈ ಮೂಲ ಕಥೆಯ ಕೆಲವು ವಿವರಗಳನ್ನು ಬದಲಾಯಿಸಿ ರಚಿಸಿದ ಒಂದು ಮಹತ್ವದ ನಾಟಕ ಇದಾಗಿದೆ. ಯೌವ್ವನ-ಭೋಗಗಳಲ್ಲಿ ಸಾಫಲ್ಯವನ್ನು ಹಂಬಲಿಸುವ ಆಕಾಂಕ್ಷೆ ಹೊತ್ತ ಮನುಷ್ಯ ಜೀವಿಯ ವಿಫಲತೆ ಹಾಗೂ ಇದರ ಅರಿವು ನಾಟಕದ ಹೃದಯವಾಗಿದೆ. ಈ ತಾತ್ತ್ವಿಕೆಯ ಮೂರ್ತ ರೂಪಕ್ಕಾಗಿ ಎರಡು ವಿಭಿನ್ನ ತಲೆಮಾರುಗಳಿಗೆ ಸೇರಿದ ಯಯಾತಿ ಮತ್ತು ಪುರುನಡುವಣ ಸಂಘರ್ಷವಾಗಿದ್ದು, ಸದಾ ಯೌವ್ವನದ ಅವಸ್ಥೆಯನ್ನು ಆಶಿಸುವ ಶಾಪಗ್ರಸ್ತ ಮುದುಕ ಯಯಾತಿ ತನ್ನ ಮಗ ಪುರು ಜೊತೆ ವಯಸ್ಸನ್ನು ವಿನಿಮಯ ಮಾಡಿಕೊಳ್ಳುತ್ತಾನೆ. ಸ್ವಾರ್ಥ ತುಂಬಿದ ಇಂತಹ ಅಸಹಜ ಕ್ರಿಯೆ ಎಲ್ಲ ದುರಂತದ ಬೀಜವಾಗುತ್ತದೆ. ಇದರ ತುತ್ತ ತುದಿಯಲ್ಲಿ ಪುರುವಿನ ಹೆಂಡತಿ ಅಹಾಯಕ ಜೀವಿ ಚಿತ್ರಲೇಖೆಯ ಆತ್ಮಹತ್ಯೆ ಸಂಭವಿಸುತ್ತದೆ. ಒಟ್ಟಿನಲ್ಲಿ ಈ ನಾಟಕವು ಮನುಷ್ಯ ಸಾಹಸದ ದುರಂತ ಚಿತ್ರವೊಂದನ್ನು ರೂಪಿಸುವ ಹವಣಿಕೆಯಾಗಿದ್ದು, ಇಲ್ಲಿಯ ಪಾತ್ರಗಳೆಲ್ಲವೂ ಮನುಷ್ಯನ ಸಾಮಾನ್ಯ ಮಟ್ಟವನ್ನು ಮೀರುವ ಹಂಬಲವನ್ನಿಟ್ಟುಕೊಂಡು ಹೊರಡುತ್ತವೆ. ಆದರೆ ಮನುಷ್ಯನ ದೌರ್ಬಲ್ಯಗಳಿಂದಲೇ ಅವುಗಳಲ ಹಂಬಲ ಪೂರ್ತಿಯಾಗುವುದಿಲ್ಲವೆಂದು ದೃಢಪಡಿಸುವುದನ್ನು ನಾವು ಕಾಣಬಹುದಾಗಿದೆ.

ಕಾರ್ನಾಡರ ಪ್ರಮುಖ ಮತ್ತೊಂದು ನಾಟಕ 'ತುಘಲಕ್'. ಈ ನಾಟಕವು ಇತಿಹಾಸ ಪ್ರಸಿದ್ಧ ಮಹಮ್ಮದ್ ಬಿನ್ ತುಘಲಕ್‌ನ ಬದುಕಿನ ಏಳು-ಬೀಳಿನ ಚಿತ್ರಣವನ್ನು ಒಳಗೊಂಡಿದೆ. ಆದರೆ ಇಲ್ಲಿ ಇತಿಹಾಸವನ್ನು ಇತಿಹಾಸವನ್ನಾಗಿ ನೋಡದೆ ಒಬ್ಬ ವ್ಯಕ್ತಿಯ ಮೂಲಕ ಇಡೀ ಸಮಾಜದ ಸಂಕ್ರಮಣಾವಸ್ಥೆಯನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ಈ ಶೋಧನೆಯ ಪ್ರಕ್ರಿಯೆಯಲ್ಲಿ ಇತಿಹಾಸದ ಜಡ ವಿವರಗಳಿಗೆ ಜೋತು ಬೀಳದೆ ಸೃಜನಶೀಲ ಸ್ವಾತಂತ್ರ್ಯವನ್ನು ವಹಿಸಿರುವುದು ಅನನ್ಯವಾಗಿದ್ದು, ಕನಸುಗಾರಿಕೆ ಮತ್ತು ವಾಸ್ತವದ ಘರ್ಷಣೆ ಈ ನಾಟಕದ ತಿರುಳೆಂದು ಗುರುತಿಸಬಹುದಾಗಿದೆ. ವಾಸ್ತವದ ಭೀಕರತೆ ತುಘಲಕ್‌ನ ಕನಸುಗಾರಿಕೆಯನ್ನು ಹಿಮ್ಮೆಟ್ಟಿಸಿದಾಗ

ಅವನ ಕ್ರಿಯೆಗಳನ್ನು ಹಿಂಸಾ ರೂಪವನ್ನು ತಾಳಿ ವಾಸ್ತವವನ್ನು ಹಿಮ್ಮೆಟ್ಟಿಸಿದಾಗ ಅವನ ಕ್ರಿಯೆಗಳು ಹಿಂಸಾರೂಪವನ್ನು ತಾಳಿ ವಾಸ್ತವವನ್ನು ಇನ್ನಷ್ಟು ಭೀಕರಗೊಳಿಸುತ್ತವೆ. ಆದರ್ಶಗಳಿಗೆ ಜೀವಕೊಡಬೇಕೆಂಬ ಆಕಾಂಕ್ಷೆಯಿಂದ ಮೊದಲ್ಗೊಂಡು ಹಿಂಸೆ ಕ್ರಮೇಣ ಮಿತಿ ಮೀರಿ ಹೋಗುತ್ತದೆ. ಸ್ವಂತ ತಂದೆ ಮತ್ತು ತಮ್ಮನನ್ನು ಕೊಲ್ಲುವುದಕ್ಕೆ ಆದರ್ಶದ ಹಂಬಲವೇ ಕಾರಣ ಎನ್ನುವ ತುಘಲಕ್ ಮುಂದು ಶೇಕ್ ಇಮಾಮುದ್ದೀನ್, ಶಿಹಾಬುದ್ದೀನ್ ಮುಂತಾದವರನ್ನು ತನ್ನ ರಾಜಕೀಯ ಅಧಿಕಾರದ ಉಳಿವಿಗಾಗಿ ಸಾಯಿಸಲು ಮುಂದಾಗುತ್ತಾನೆ. ಹೀಗಾಗಿ ಅವನ ದೈವತ್ವದ ತುಡಿತ ಎಷ್ಟೇ ಪ್ರಬಲವಾಗಿದ್ದರೂ ಆಳದಲ್ಲಿ ಹುದುಗಿದ್ದ ಹಿಂಸಾ ಪ್ರೇಮ ಹಾಗೂ ಸಮಾಜದ ಗೊಂದಲಗಳ ಮುಂದೆ ಅದು ಮುರುಟು ಹೋಗುತ್ತದೆ. ಮೂಕ ಜನತೆ, ಅಮೀರರು, ಧರ್ಮ ಗುರುಗಳು ಮುಂತಾದವರ ಜೊತೆಗಿನ ಒಡನಾಟದಲ್ಲಿ ತುಘಲಕ್‌ನ ವಿವಿಧ ಮುಖಗಳು ಅನಾವರಣಗೊಳ್ಳುತ್ತವೆ. ಅಂತ್ಯದಲ್ಲಿ ಎಲ್ಲಿ ಆದರ್ಶಗಳು ಕರಗಿ ಹೋಗಿ, ಶೂನ್ಯ ಒಂದೇ ನಿಜವಾಗಿ ಒಂಟಿತನದಲ್ಲಿ ಬಳಲುವ ಸ್ಥಿತಿ ಕಾಣುತ್ತದೆ. ನಾಟಕದ ತುಂಬ ತುಘಲಕ್‌ನ ವ್ಯಕ್ತಿತ್ವ ಚೆಲ್ಲಿಕೊಂಡಿದ್ದರೂ ಅದನ್ನು ಮೀರಿದ ವಿಷಾದದ ದನಿ ಹೊಮ್ಮುತ್ತದೆ. ಅಂತೆಯೆ ಆ ಮೂಲಕ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಮೌಲ್ಯಗಳ ಅವನತಿಯನ್ನು ಪರೋಕ್ಷವಾಗಿ ಅವಲೋಕಿಸುವ ಆಶಯ ಈ ನಾಟಕದಿಂದ ವ್ಯಕ್ತವಾಗುವುದನ್ನು ಗುರುತಿಸಬಹುದಾಗಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಈ ನಾಟಕವು ಕನ್ನಡದ ಉತ್ತಮ ನಾಟಕಗಳಲ್ಲಿ ಒಂದು ಎಂದು ಕರೆಯಬಹುದಾಗಿದೆ.

ಗಿರೀಶ್ ಕಾರ್ನಾಡ್ ಅವರ ಮತ್ತೊಂದು ಪ್ರಮುಖ ನಾಟಕ ಹಯವದನ. ದೇಹ ಮತ್ತು ಮನಸ್ಸುಗಳ ಸಂಬಂಧವನ್ನು ಶೋಧಿಸುವುದು ಈ ನಾಟಕದ ಪ್ರಮುಖ ಕಾಳಜಿಯಾಗಿದೆ. ಇದರ ಜೊತೆಗೆ ಪೂರ್ಣತೆಗಾಗಿ ಹಂಬಲಿಸುವ ಅದನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಲು ವಿಫಲನವಾಗುವ ಮನುಷ್ಯನ ಅಸ್ತಿತ್ವ ದುರಂತವನ್ನು ಈ ನಾಟಕ ಪ್ರತಿಧ್ವನಿಸುತ್ತದೆ. ದೇವದತ್ತ–ಕಪಿಲ–ಪದ್ಮಿನಿಯರ ಸಂಬಂಧಗಳಲ್ಲಿ ನಾಟಕ ಸಾಗುತ್ತದೆ. ಕಪಿಲನ ದೇಹವನ್ನು ಒಟ್ಟಾಗಿ ಬಯಸುವ ಪದ್ಮಿನಿ ಚಿತೆ ಹೇಳುತ್ತಾಳೆ. ಈ ಅಂತ್ಯ ತಾತ್ತ್ವಿಕವಾಗಿ ಮತ್ತು ತಾಂತ್ರಿಕವಾಗಿ ಅತ್ಯಂತ ಸಮರ್ಪಕವಾಗಿದೆ. ಮೂಲ ಕತೆಯೊಂದಿಗೆ ಒಂದು ಉಪಕಥೆಯ ಬೆಸುಗೆಯನ್ನು ಸಾಧಿಸುವ ಪ್ರಕ್ರಿಯೆ ನಾಟಕದಲ್ಲಿದ್ದು, ಅರ್ಧ ಕುದುರೆ, ಅರ್ಧ ಮನುಷ್ಯನಾದ ಹಯವದನ ಪರಿಪೂರ್ಣತೆಗಾಗಿ ಒದ್ದಾಡುತ್ತಾ ಕೊನೆಗೆ ಕುದುರೆಯಾಗಿ ಸಂತೋಷಪಡುತ್ತಾನೆ. ನಾಟಕದ ಪ್ರಾರಂಭದಲ್ಲಿ ಗಣೇಶನ ಪೂಜೆಯ ಸನ್ನಿವೇಶ ಒಂದು ಧಾರ್ಮಿಕ ವಿಧಿಯಾಗಿ ಮಾತ್ರ ಮೂಡದೆ ಕಥಾ ವಸ್ತುವಿಗೆ ಸಂಗತವಾಗುವಂತೆ ಇದೆ. ಒಟ್ಟಿನಲ್ಲಿ ದೇವರು, ಮನುಷ್ಯ, ಪ್ರಾಣಿ ಹೀಗೆ ಮೂರು ನೆಲೆಯಲ್ಲಿ, ಮೂರು ದುಷ್ಟಾಂತಗಳ ಮೂಲಕ ಪರಿಪೂರ್ಣತೆಯ ಕಲ್ಪನೆಯನ್ನು ಈ ನಾಟಕ ವಿವೇಚಿಸುತ್ತದೆ ಎಂಬುದು ಗಮನಾರ್ಹವಾಗಿದೆ.

ಗಿರೀಶ್ ಕಾರ್ನಾಡರ ಮತ್ತೊಂದು ನಾಟಕ 'ಅಂಜುಮಲ್ಲಿಗೆ'. ಕಾರ್ನಾಡರು ಈ ನಾಟಕದಲ್ಲಿ ಸಾಮಾಜಿಕ ವಸ್ತುವನ್ನು ಬಳಸಿಕೊಂಡಿದ್ದಾರೆ. ಈ ನಾಟಕವು ಇಂಗ್ಲೆಂಡಿನಲ್ಲಿ ವಾಸಿಸುವ ಭಾರತೀಯರ ಬದುಕನ್ನು ಕೇಂದ್ರವಾಗಿಟ್ಟುಕೊಂಡು ಎರಡು ಬಗೆಯ ವಿಷಯಗಳನ್ನು ತೀವ್ರವಾಗಿ ಶೋಧಿಸುತ್ತದೆ. ಒಂದು ಗಂಡು–ಹೆಣ್ಣಿನ ಸಂಬಂಧ, ಮತ್ತೊಂದು ಅಕ್ಕ–ತಮ್ಮಂದಿರಾದ ಯಾಮಿನಿ –ಸತೀಶರ ಸಂಬಂಧ ಪ್ರೀತಿಯನ್ನು ಮೀರಿ ಕಾಮವನ್ನೊಳಗೊಂಡಿದೆ. ಇವರು ಶ್ರೀಮಂತ ಕುಟುಂಬದವರಾದರೂ ಇವರ ಬಾಲ್ಯ ಅಸಹನೀಯವಾದದ್ದು. ಸತೀಶನನ್ನು ತನ್ನ ಹಿಡಿತದಲ್ಲಿ ಸದಾ ಇಟ್ಟುಕೊಳ್ಳುವ ಯಾಮಿನಿ ಒಂಟಿತನದಿಂದ ನರಳುತ್ತಾಳೆ. ಸತೀಶ ಜೂಲಿಯಾರ್

ಸಂಬಂಧವನ್ನು ಹಾಳು ಮಾಡಲು ವಿಫಲಳಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅನೈತಿಕವೆನಿಸುವ ಅಕ್ಕ–ತಮ್ಮಂದಿರ ಈ ಸಂಬಂಧ ಹೀಗೆ ದುರಂತದಲ್ಲಿ ಮುಗಿಯುತ್ತದೆ. ಆದರೆ ನಾಟಕದ ಇನ್ನೊಂದು ಭಾಗವು ವರ್ಣ ಸಂಬಂಧದಲ್ಲಿ ಗಂಡು–ಹೆಣ್ಣಿನ ಸಂಬಂಧ ಅಂತರ್ಗತವಾಗಿದ್ದು, ಆರ್ಥಿಕವಾಗಿ ಕೆಳವರ್ಗಕ್ಕೆ ಸೇರಿದ ಡ್ರೈವರ್ ಡೇವಿಡ್ ತಾನು ಬಿಳಿಯ ಎಂಬ ಒಂದೇ ಕಾರಣಕ್ಕಾಗಿ ಶ್ರೀಮಂತರೂ ಬುದ್ಧಿವಂತರೂ ಆದ ಭಾರತೀಯರನ್ನು ಕೀಳಾಗಿ ಕಾಣುತ್ತಾನೆ ಇವನ ಮುಂದೆ ಸತೀಶ, ಹರೀನ್, ಗೌತಮ ಎಲ್ಲರೂ ಬಲಹೀನರಾಗಿ ಬಿಡುತ್ತಾರೆ ಎರಡು ಎಳೆಗಳಿಗೆ ಸಮರ್ಪಕವಾದ ಒಂದು ಕಲಾತ್ಮಕ ಬಂಧ ನಾಟಕಕ್ಕೆ ಒದಗಿ ಬಂದಿಲ್ಲ. ತಾತ್ವಿಕವಾಗಿ ದುರ್ಬಲವಾದ ಪರಿಮಿತಿಗಳ ನಡುವೆಯೂ ಈ ನಾಟಕವು ಎಲ್ಲರ ಗಮನವನ್ನು ಸೆಳೆಯುತ್ತದೆ.

ನಾಗಮಂಡಲ ಗಿರೀಶ್ ಕಾರ್ನಾಡರ ಮತ್ತೊಂದು ಪ್ರಮುಖ ಮತ್ತು ಯಶಸ್ವಿ ನಾಟಕ. ಜಾನಪದ ಲೋಕದ ಅರ್ಥಪೂರ್ಣ ಆವರಣದಲ್ಲಿ ಕಡೆದ ಒಂದು ಅರ್ಥಪೂರ್ಣ ಕೃತಿ. ಪಾಳುಬಿದ್ದ ದೇವಸ್ಥಾನದಲ್ಲಿ ಕತ್ತಲಾದ ಮೇಲೆ ಜ್ಯೋತಿಗಳು ಬಂದು ಕಥೆಗಳನ್ನು ನಿರೂಪಿಸುತ್ತವೆ. ಇಂತಹ ಒಂದು ಕಥೆ ರಾಣಿ–ಅಪ್ಪಣ್ಣ–ನಾಗಪ್ಪರನ್ನು ಒಳಗೊಂಡಿದೆ. ಗಂಡನನ್ನು ಒಲಿಸಿಕೊಳ್ಳಲು ಕುರುಡವ್ವ ಕೊಟ್ಟಬೇರನ್ನು ರಾಣಿ ಸಾರಿಗೆ ಸೇರಿಸುತ್ತಾಳೆ. ಅದನ್ನು ಕುಡಿದ ಹಾವು ಗಂಡನಿಲ್ಲದ ವೇಳೆಯಲ್ಲಿ ಮನೆಗೆ ಹೊಕ್ಕಿ ಗಂಡನ ರೂಪ ತಾಳಿ ರಾಣಿಯನ್ನು ಕೂಡಿ ಬಸಿರು ಮಾಡುತ್ತದೆ. ಇದರಿಂದ ಕೆರಳಿದ ಗಂಡ ಅವಳನ್ನು ವಿಚಾರಣೆಗೆ ಗುರಿ ಮಾಡುತ್ತಾನೆ. ಅವಳು ಪಾವಿತ್ರ್ಯದ ಬಗ್ಗೆ ಸಾಕ್ಷಿ ನುಡಿಯುತ್ತಾಳೆ. ಹಾವು ಕಚ್ಚದೆ ಇದ್ದುದ್ದರಿಂದ ರಾಣಿ ದೇವಿಯಾಗುತ್ತಾಳೆ ಮತ್ತು ಗಂಡನು ಅವಳ ಭಕ್ತನಾಗುತ್ತಾನೆ. ನಂತರ ಒಂದು ದಿನ ಹಾವು ಸಾಯುತ್ತದೆ ರಾಣಿ ಅದಕ್ಕೆ ತನ್ನ ಮಗನಿಂದ ಶ್ರಾದ್ಧ ಮಾಡಿಸುತ್ತಾಳೆ. ಈ ಅದ್ಭುತ ಕಥೆಯನ್ನು ಗಿರೀಶ್ ಕಾರ್ನಾಡರು ಗಾಡ ಅನುಭವ ನೀಡುವ ನಾಟಕವನ್ನಾಗಿಸಿದ್ದಾರೆ ಒಟ್ಟಿನಲ್ಲಿ ಗಂಡು ಹೆಣ್ಣಿನ ಲೈಂಗಿಕ ಸಮಸ್ಯೆಯನ್ನು ಒಳಗೊಂಡಿದ್ದು ಅದನ್ನು ಬದುಕಿನ ನಿಗೂಢ ಅರ್ಥಪೂರ್ಣತೆಯಿಂದ ತಾತ್ವಿಕವಾಗಿ ಶೋಧಿಸುವುದನ್ನು ನಾಟಕದಿಂದ ಗಮನಿಸಬಹುದಾಗಿದೆ.

ಕಾರ್ನಾಡರು 1990ರಲ್ಲಿ ರಚಿಸಿದ ಮತ್ತೊಂದು ನಾಟಕ 'ತಲೆದಂಡ'. ಈ ನಾಟಕದಲ್ಲಿ ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿಯಲ್ಲಿ ಬಸವಣ್ಣನು ವಹಿಸಿದ ಪಾತ್ರವನ್ನು ಕುರಿತು ತೀವ್ರವಾಗಿ ಪರಿಶೀಲಿಸುವ ಒಂದು ಮಹತ್ವದ ನಾಟಕವಾಗಿದೆ. ಅಂದರೆ ಕಲ್ಯಾಣದಲ್ಲಿ ಬಸವಣ್ಣನು ಉಂಟುಮಾಡಿದ ಕ್ರಾಂತಿ ಮತ್ತು ಅದರಿಂದ ಪ್ರತಿಕ್ರಿಯೆಗಳು ನಾಟಕದ ಹೊರ ಆವರಣದಲ್ಲಿ ಗಮನಿಸಿದರೆ, ಒಳ ಆವರಣದಿಂದ ಉಂಟಾಗುವ ಸಾಮಾಜಿಕ–ಧಾರ್ಮಿಕ ಬಿಕ್ಕಟ್ಟು ಮತ್ತು ಹೋರಾಟ, ಪ್ರತಿಭಟನೆಯ ಅನಿವಾರ್ಯ–ವೈರುಧ್ಯಗಳ ವಿನ್ಯಾಸವನ್ನು ಒಳಗೊಂಡಿದೆ. ಅಂತೆಯೆ ವ್ಯವಸ್ಥೆಯ ಬದಲಾವಣೆ ಮಾಡಬಯಸುವ ಕ್ರಿಯೆ ಕ್ರಮೇಣ ಪರಸ್ಪರ ವಿರುದ್ಧವಾದ ಎರಡು ಮುಖಗಳನ್ನು ಗಳಿಸಿಕೊಳ್ಳುವ ಪ್ರಕ್ರಿಯೆ ಈ ನಾಟಕದ ಜೀವಾಳವಾಗಿದ್ದು, ಏಕಮುಖಿಯಾಗಿ ಒಂದು ಆದರ್ಶವನ್ನು ವೈಭವೀಕರಿಸದೆ ಎರಡೂ ಮುಖಗಳನ್ನು ಸಂಯಮದಿಂದ ಅವಲೋಕಿಸಿ ಸಮತೋಲನವನ್ನು ಕಾಯ್ದುಕೊಂಡಿರುವುದು ನಾಟಕದ ವೈಶಿಷ್ಟ್ಯವಾಗಿದೆ.

'ಹಿಟ್ಟಿನ ಹುಂಜ' ನಾಟಕದಲ್ಲಿ ಮನುಷ್ಯ ನಂಬಿದ ಮೌಲ್ಯ ಮತ್ತು ಪ್ರವೃತ್ತಿಗಳ ನಡುವಿನ ಮೌನ ಹೋರಾಟವೇ ಈ ನಾಟಕದ ವಸ್ತುವಾಗಿದೆ. ಜನ್ನನ 'ಯಶೋಧರ ಚರಿತೆ'ಯಿಂದ ಪ್ರೇರಣೆ ಪಡೆದ ಈ ವಸ್ತು, ಕವಿಯ ಆಶಯಕ್ಕೆ ಸಂಪೂರ್ಣ ಭಿನ್ನವಾಗಿ 'ಜೀವದಯೆ ಜೈನಧರ್ಮಂ' ಎಂಬ ತತ್ವವನ್ನು ಹಿಂದೆ ತಳ್ಳಿ 'ಪ್ರವೃತ್ತಿ ಮಾನುಷ ಸಹಜಧರ್ಮಂ' ಎಂಬ ತತ್ವವನ್ನೊಳಗೊಂಡಿದೆ.

'ಅಗ್ನಿ ಮತ್ತು ಮಳೆ' ಕಾರ್ನಾಡರು ಇದುವರೆಗೆ ಬರೆದಿರುವ ನಾಟಕಗಳಲ್ಲಿಯೇ ಅತ್ಯಂತ

ಮಹತ್ವಕಾಂಕ್ಷೆಯ ನಾಟಕ. ಇದು ಮಹಾಭಾರತದ ವನಪರ್ವದಲ್ಲಿ ಬರುವ ಲೋಮಾಶರು ಯುದಿಷ್ಠರನಿಗೆ ಹೇಳಿದ ಯುಕ್ರಿತನ ಕತೆಯನ್ನು ಒಳಗೊಂಡಿದೆ. ಅದರೊಂದಿಗೆ ಹಾಸುಹೊಕ್ಕಾಗಿ ನಾಟಕದೊಳಗಿನ ನಾಟಕವಾಗಿ ಬರುವ ಇಂದ್ರ ವಿಡಯದ ಕಥೆ. ಮಹಾಭಾರತದೊಡನೆ ಯಾವ ಸಂಬಂಧವೂ ಇಲ್ಲದ ನಿಷಾದಕನ್ಯೆ, ನಿತ್ತಿಲೆಯ ಕಥೆ ಹಾಗೂ 'ಇಂದ್ರ ವಿಜಯ' ನಾಟಕವನ್ನು ಆಡಿ ತೋರಿಸುವ ನಟರ ಕಥೆಗಳು ಸೇರಿವೆ. ಆದರೆ ಈ ನಾಲ್ಕು ಕಥೆಗಳನ್ನು ಒಂದೇ ವಸ್ತುವಿನಲ್ಲಿ ಹೆಣೆಯುವ ನಿಧಾನದ ಹಂದೆಯ ಒಂದು ಸಂಯೋಜಿತ ತರ್ಕವಿದೆ. ಅಂದರೆ ಆ ಮೂಲಕ ಒಂದು ಸಮಗ್ರವಾದ ಸಾಂಸ್ಕೃತಿಕ ವಿನ್ಯಾಸವನ್ನು ಸೃಷ್ಟಿಸುವ ಆಸ್ಥೆಯ ವಿನ್ಯಾಸಕ್ಕೆ ಹೆಚ್ಚಿನ ಲಕ್ಷ್ಯ ದೊರೆತಿದೆ. ಈ ವಿನ್ಯಾಸದಲ್ಲಿ 'ಇಂದ್ರ ವಿಜಯ'ದ ಕಥೆ ಸಂಕೇತಿಸುವ ವೈದಿಕ ದೇವತೆಗಳು, ಆಶ್ರಮ ಮತ್ತು ಯಜ್ಞ ಶಾಲೆಗಳನ್ನು ಒಳಗೊಂಡ ಬ್ರಾಹ್ಮಣರು, ನಿತ್ತಿಲೆಯ ಕಥೆಯಲ್ಲಿ ಬರುವ ವಿಷಾದರು ಹಾಗೂ ಒಂದು ರೀತಿಯಿಂದ ಬಹಿಷ್ಕೃತ ವರ್ಗಗಳಿಗೆ ಸೇರಿದ್ದಾರೆ. ಇದರಿಂದಾಗಿ ಪ್ರಧಾನ ಸಂಸ್ಕೃತಿಯೊಡನೆ ಉಪಸಂಸ್ಕೃತಿಯು ಬೆರೆತು ಸಮಗ್ರತೆಯ ಕಲ್ಪನೆ ತಂದುಕೊಡುತ್ತದೆ. ಈ ಸಾಂಸ್ಕೃತಿಕ ವಿನ್ಯಾಸವನ್ನು ಮೀರಿದ ಮಾನವೀಯ ಸಂಬಂಧಗಳ ವಿನ್ಯಾಸ, ತಂದೆ–ಮಗ, ಅಣ್ಣ–ತಮ್ಮ, ವ್ಯಕ್ತಿ–ಸಮಾಜ ನಾಟಕದ ಅಂತರಂಗವನ್ನು ರೂಪಿಸಿವೆ. ಒಟ್ಟಿನಲ್ಲಿ ಪುರಾಣ ವಸ್ತುವನ್ನಾಧರಿಸಿದ ಮಾನವನ ಮೂಲಭೂತ ಅಸ್ತಿತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನೆತ್ತಿಕೊಳ್ಳುವ ಮೂಲಕ ಮಾನವೀಯ ಸಂಬಂಧಗಳಲ್ಲಿ ಮತ್ತೆ ಮತ್ತೆ ತಲೆದೋರುವ ಹಿಂಸೆ ಹಾಗೂ ಪ್ರೇಮಗಳ ದ್ವಂದ್ವ ಈ ನಾಟಕದ ಕೇಂದ್ರಬಿಂದುವಾಗಿದೆ.

ಗಿರೀಶ್ ಕಾರ್ನಾಡರು 1999ರಲ್ಲಿ ಬರೆದ 'ಟಿಪ್ಪುವಿನ ಕನಸುಗಳು' ಎಂಬುದು ಒಂದು ಮಹತ್ವದ ನಾಟಕವಾಗಿದೆ. ಈ ನಾಟಕವು ಒಂದು ಮಗ್ಗುಲಲ್ಲಿ ಅಮೆರಿಕದಲ್ಲಿ ಯುದ್ಧವನ್ನು ಸೋತ ಇಂಗ್ಲೀಷ್ ಅಧಿಕಾರಿಯೊಬ್ಬ ಭಾರತದ ಗವರ್ನರ್ ಜನರಲ್ ಆಗಿ ಬಂದು ತನ್ನ ಸೋಲಿನ ಸೇಡನ್ನು ಟಿಪ್ಪುವಿನ ಮೇಲೆ ತೀರಿಸಿಕೊಂಡು ಕಳೆದುಹೋದ ತನ್ನ ಮಾನವನ್ನು ಪುನಃ ಭದ್ರ ಪಡಿಸಿಕೊಳ್ಳುತ್ತಾನೆ ಎಂಬ ಅಂಶ ಮನುಕುಲದ ಯುದ್ಧಗಳ ಹಿಂದಿರುವ ಕ್ಷುದ್ರಕಾರಣಗಳಿಗೆ ಹಿಡಿದ ಕನ್ನಡಿಯಾಗಿದೆ. ಮತ್ತೊಂದು ಮಗ್ಗುಲಿನಿಂದ ಟಿಪ್ಪುವಿನ ಕನಸ್ಸಿನಲ್ಲಿ ತಪಸ್ಸಿಗೆ ಕುಳಿತ ಸ್ತ್ರೀ, ಟಿಪ್ಪುವಿನ ಆಜ್ಞೆ ಪಾಲಿಸುವ ದಿವಾನ್ ಪೂರ್ಣಯ್ಯ, ಚೀನಿ ವೃದ್ಧನೊಬ್ಬ ಚೀನಿ ದೊರೆಯಿಂದ ಪಡೆದ ಆನೆ–ಕುದುರೆ ಚಿತ್ರಣ, ಗಂಡಿನ ವೇಷದ ಹೆಣ್ಣಿನ ಚಿತ್ರ, ಟಿಪ್ಪುವಿನ ತಂದೆ ಹೈದರಾಲಿ ಹೀಗೆ ಇನ್ನು ಮೊದಲಾದವು ಕಾಣಿಸಿಕೊಳ್ಳುವುದು ಆತನ ಸನ್ನಿವೇಶದ ವಿಷಮತೆಯನ್ನು ಧ್ವನಿಸುವ ಸಾಂಕೇತಿಕತೆಗಳಾಗಿವೆ. ಒಟ್ಟಿನಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಹಿನ್ನೆಲೆಯಲ್ಲಿ ಟಿಪ್ಪುವಿನ ಸ್ಥಾನಮಾನ ಏನೆಂಬುದನ್ನು ಕುರಿತು ನಾಟಕ ಒತ್ತು ಕೊಟ್ಟಿದೆ ಎಂಬುದು ಗಮನಾರ್ಹ.

**ಉಪಸಂಹಾರ**

ಒಟ್ಟಿನಲ್ಲಿ ಗಿರೀಶ್ ಕಾರ್ನಾಡರು ತಮ್ಮ ಎಲ್ಲಾ ಕೃತಿಗಳನ್ನು ಮನುಷ್ಯನ ಮೂಲಭೂತ ಅಭಿಪ್ಸೆಗಳನ್ನು ಸಂಕ್ರಮಣ ಅವಸ್ಥೆಗಳನ್ನು ಗಾಢವಾಗಿ ಚಿತ್ರಿಸಿದ್ದು ನೇರವಾದ ಸಾಮಾಜಿಕ ವಸ್ತುವನ್ನು ಅಷ್ಟಾಗಿ ಕೈಗೆತ್ತಿಕೊಳ್ಳದೆ ಇತಿಹಾಸ, ಪುರಾಣ, ಜಾನಪದ ಕ್ಷೇತ್ರಗಳಿಂದ ತಮ್ಮ ದ್ರವ್ಯವನ್ನು ಆಯ್ದುಕೊಂಡು ಇಂದಿಗೂ ಪ್ರಸ್ತುತವಾಗುವಂತೆ ಬರೆಯುವ ಆಶಯವನ್ನು ಗಮನಾರ್ಹಪಡಿಸಿದ್ದಾರೆ. ಅಂತೆಯೇ ಅವರು ನಾಟಕದಿಂದ ನಾಟಕಕ್ಕೆ ಬೆಳೆಯುತ್ತಾ ಪ್ರಬುದ್ಧತೆಗಳಿಸುವ ಮೂಲಕ ಕನ್ನಡ ನಾಟಕ ಸಾಹಿತ್ಯವನ್ನು ಬೆಳೆಸಿದ್ದು, ಒಂದು ಹೊಸ ಆಯಾಮವನ್ನು ನೀಡಿದ್ದಾರೆ

**ಆಕರ ಗ್ರಂಥಗಳು**


- ಯಯಾತಿ
- ತುಘಲಕ್

- ಹಯವದನ
- ಅಂಜುಮಲ್ಲಿಗೆ
- ಹಿಟ್ಟಿನ ಹುಂಜ
- ನಾಗಮಂಡಲ
- ತಲೆದಂಡ
- ಅಗ್ನಿ ಮತ್ತು ಮಳೆ
- ಟಿಪ್ಪುವಿನ ಕನಸುಗಳು

**ಪರಾಮರ್ಶನ ಗ್ರಂಥಗಳು**


- ಅನ್ನದಾನೇಶ್. (2012). *ಗಿರೀಶ ಕಾರ್ನಾಡರ ನಾಟಕಗಳು– ಒಂದು ಅಧ್ಯಯನ.* ಅಂಕಿತ ಪುಸ್ತಕ
- ಆಮೂರ ಜಿ.ಎಸ್. (2012). *ಗಿರೀಶ್ ಕಾರ್ನಾಡ್ ಮತ್ತು ಭಾರತೀಯ ರಂಗಭೂಮಿ.* ಮನೋಹರ ಗ್ರಂಥಮಾಲಾ.
- ಮರುಳ ಸಿದ್ದಪ್ಪ, ಕೆ. (2013). *ಆಧುನಿಕ ಕನ್ನಡ ನಾಟಕ.* (ಐದನೇ ಮುದ್ರಣ). ಅಂಕಿತ ಪುಸ್ತಕ.
- ಮಾಧವ ಕುಲಕರ್ಣಿ. (2000). *ಗಿರೀಶ್ ಕಾರ್ನಾಡರ ನಾಟಕ ಪ್ರಪಂಚ.* ತನುಮನ ಪ್ರಕಾಶನ
- ರಾಜು ಹೆಗಡೆ. (2007). ಗಿರೀಶ್ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ. ಸಪ್ನ ಬುಕ್ ಹೌಸ್